ಮಾಡಬೇಕೆಂದು ತಿಳಿಯದೆ ಗರ ಬಡಿದವನಂತೆ ಕುಳಿತಿದ್ದ.

ದಿನಗಳು ಉರುಳಿದವು. ತಾಯವ್ವ ಪದ್ಮಾಳನ್ನು ತನ್ನ ಕಣ್ಣ ಗೊಂಬೆಯಂತೆ ಕಾಳಜಿ ಮಾಡಿದಳು. ತಾಯವ್ವನ ಆಣತಿಯಂತೆ ದಿನದಿಂದ ದಿನಕ್ಕೆ ಪದ್ಮಾಳ ಒಳಗಿನ ಹುಚ್ಚು ಕಮ್ಮಿಯಾಗುತ್ತಾ ಬಂತು. ಅವಳು ಬಸುರಿ ಇರೋದು ಸುತ್ತಮುತ್ತಲ ಮನೆಯವರಿಗೆಲ್ಲಾ ಗೊತ್ತಾಗಿ, 'ಪಾಪ ಮದ್ವಿಯಾಗಿ ಬಾಳ ವರ್ಷ ಆಗಿತ್ತು. ಪದ್ಮಾಗ ಮಕ್ಕಳ ಆಗುಲ್ಲ ಅನ್ಕೊಂಡಿದ್ವಿ. ದೇವ್ರಾಜ ದಡಕ್ಕನ ದುಡ್ಡಿ ಬ್ಯಾರೆ ಮದ್ವಿಯಾಗಿದ್ರ ಪದ್ಮಾನ ಬಾಳೆ ಮೂರಾಬಟ್ಟೆಯಾಗ್ತಿತ್ತು. ದೇವ್ರು ಅಕಿ ಪಾಲಿಗೆ ಅದಾನ. ಎಲ್ಲಾ ಚೊಲೋ ಆತು ನೋಡೀಗ...' ಅಂತ ಮಾತಾಡಿಕೊಂಡರು.

ಪದ್ಮಾ ಮೊದಲಿನಂತಾದಳು. ಅವಳಿಗೆ ಹುಚ್ಚು ಹಿಡಿದಿದ್ದು, ತಾನು ಮನೆ ಬಿಟ್ಟು ಹೋಗಿದ್ದು ಯಾವುದೂ ನೆನಪಿಲ್ಲ. ಸಹಜವೆಂಬಂತೆ ಇದ್ದಳು. ತಾಯವ್ವ ತೋರುವ ಅಕ್ಕರೆಗೆ, ಪ್ರೀತಿಗೆ ಹ್ಯಾಗೆ ಕೃತಜ್ಞಳಾಗಿರಬೇಕೆಂಬುದೇ ಪದ್ಮಾಳಿಗೆ ತೋಚದಾಗಿತ್ತು. ಎಲ್ಲ ಮನೆಗೆಲಸ ತಾಯವ್ವನೇ ಮಾಡುತ್ತಿದ್ದಳು. ಪದ್ಮಾ ಮಾಡಲು ಹೋದರೆ, 'ನೀನು ಬಸುರಿ ಹೆಣ್ಮಗಳು. ಆರಾಮಿರು. ಹಡೆದಿಂದ ಮತ್ತೆ ಕೆಲ್ಸ ಮಾಡೋದು ಐತಿ...' ಅಂತ ಪ್ರೀತಿಯಿಂದ ಗದರುತ್ತಿದ್ದಳು. ಪದ್ಮಾ ನಗುತ್ತ ಹ್ಞೂಂಗುಟ್ಟುತ್ತಿದ್ದಳು.

ದೇವರಾಜ ಎಂದಿನಂತೆ ಕಳೆಯಾಗಿರಲಿಲ್ಲ. ಜೋಲು ಮಾರಿ ಹಾಕಿ ತಿರುಗುತ್ತಿದ್ದ. ಪದ್ಮಾಳಿಗೆ ಅವನನ್ನು ನೋಡಿ ಕೆಡುಕೆನಿಸುತ್ತಿತ್ತು. 'ಯಾಕ್ರಿ ಸಪ್ಪಗದಿರಿ. ಆರಾಮೈತಿಲ್ಲ. ಡಾಕ್ಟ್ರ ಹತ್ರಾನರ ತೋರಿಸ್ಕೊಳ್ರಿ' ಎಂದು ಮಮತೆ ತೋರುತ್ತಿದ್ದಳು. ಇಂವ, 'ಹೇ ಆರಾಮದಿನಿ. ನನಗೇನಾಗೈತಿ' ಅಂತ ತುಟಿಯಲ್ಲಿ ನಗು ಅರಳಿಸಲು ಯತ್ನಿಸಿ ಸೋಲುತ್ತಿದ್ದ. ಅವನ ಗೆಳೆಕಾರರು, 'ದೇವ್ರಾಜ, ಅಂತೂ ಗಣ್ಮಾಗ ಅಂತ ತೋರಿಸಿದೆಪಾ. ಇನ್ನೇನು ಮಗ ಬಂದು ಬಿಡ್ತಾನ. ಪಾರ್ಟಿ ಕೊಡಿಸೋ ಮತ್ತ...' ಎಂದು ನಕರಿ ಮಾಡುತ್ತಿದ್ದರು. ತನ್ನೊಳಗಿನ ಸಂಕಟ ತೋರಗೊಡದೆ, 'ಹೇ ಕೊಡಿಸೂಣು...' ಅಂತ ಹೇಳುತ್ತಲೇ ಅಲ್ಲಿಂದ ಜಾಗ ಖಾಲಿ ಮಾಡುತ್ತಿದ್ದ. ಮೈ ಕೈ ತುಂಬಿಕೊಂಡಿದ್ದ ದೇವರಾಜ ದಿನದಿಂದ ದಿನಕ್ಕೆ ಸೊರಗಿ ಸೋತವನಂತೆ ತೋರತೊಡಗಿದ್ದ. ಅವನ ಅವ್ವಅಪ್ಪ, ಹೆಂಡತಿ ಇವನ ಅವತಾರ ನೋಡಿ ಮರುಗುತ್ತಿದ್ದರು.

ಹೊತ್ತು ಹೊತ್ತಿಗೆ ಊಟ ಮಾಡದೇ ಚಿಂತಾಕ್ರಾಂತನಾಗಿ ಸುಮ್ಮನೆ ಕುಳಿತು ಬಿಡುತ್ತಿದ್ದ. ಹೆಂಡತಿಯ ಬಸಿರು ಮಾಡಿದವನು ಯಾರಿರಬಹುದೆಂದು ಆಲೋಚಿಸುತ್ತಿದ್ದ. ಹೀಗೆ ಆಲೋಚಿಸುವಾಗ ಅವನೊಳಗೆ ನೂರು ಸಂಕಟದ ಅಲೆಗಳೆದ್ದು ಹಿಂಸಿಸುತ್ತಿದ್ದವು. ತನಗೆ ಮಕ್ಕಳನ್ನು ಹುಟ್ಟಿಸುವ ತಾಕತ್ತಿಲ್ಲವೆಂಬುದನ್ನು ನೆನೆದು ಕಣ್ಣೀರುಗರೆಯುತ್ತಿದ್ದ. ರಾತ್ರಿ ಪದ್ಮಾ ಯಾರೊಂದಿಗೋ ಮಲಗಿದಂತೆ ಕನಸು ಬಿದ್ದು ಚಿಟ್ಟನೆ ಚೀರಿ ಬೆವತು ಬಿಡುತ್ತಿದ್ದ. ಹೀಗಾದಾಗೆಲ್ಲ ಮನೆ ಮಂದಿ ಹೌಹಾರುತ್ತಿದ್ದರು. ದೇವರಾಜ ಇತ್ತಿತ್ತಲಾಗಿ ರಾತ್ರಿ ಮಲಗಲು ಹಾಸಿಗೆ ಹಿಡಿದುಕೊಂಡು ಹನುಮಪ್ಪನ ಗುಡಿಗೆ ಹೋಗತೊಡಗಿದ. ರಾತ್ರಿ ಗುಡಿಯಲ್ಲಿ ಹತ್ತಾರು ಜನ ಮಲಗುತ್ತಿದ್ದರು. ಇಂವ ಕಣ್ಣಿಗೆ ಕಣ್ಣು ಹಚ್ಚದೆ ಎದ್ದು ಕುಳಿತು ಆ ಹತ್ತಾರು ಜನರಲ್ಲಿ ಪದ್ಮಾಳೊಂದಿಗೆ ಮಲಗಿದವನು ಯಾರಿರಬಹುದೆಂದು ಕಣ್ಣು ಪಿಳುಕಿಸದೆ ಎಲ್ಲರನ್ನೂ ದಿಟ್ಟಿಸುತ್ತಿದ್ದ. ಕಣ್ಣು ಸೋತ ನಂತರ ಪತ್ತೆ ಹಚ್ಚುವುದು ಹ್ಯಾಗೆಂದು ತಿಳಿಯದೆ ಯಾವಾಗಲೋ ನಿದ್ದೆ ಹೋಗುತ್ತಿದ್ದ.

ಒಂದು ದಿನ ಹನುಮಪ್ಪನ ಗುಡಿಯಲ್ಲಿ ರಾತ್ರಿ ಮಲಗಿ ಬೆಳಗ್ಗೆ ಮನೆಗೆ ಬಂದಾಗ ಪದ್ಮಾಳ